OS No. 59/2019

DW-1 ತಿಪ್ಪೇಸ್ವಾಮಿ

Date: 17.09.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ ಪಿ ಎಂ ಆರ್ ವಕೀಲರಿಂದಃ**

ನಾವು ಸಂಪ್ರದಾಯಿಕವಾಗಿ ಗಣಪತಿ ದೇವಸ್ಥಾನ ಮತ್ತು ಆಂಜನೇಯ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸುತ್ತೇವೆ ಎಂದರೆ ಸರಿ. 1984-85 ರಿಂದ 2013-14 ರವರೆಗೆ ದಾವಾ ಸ್ವತ್ತಿನ ಖಾತೆ ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಿಪ್ಪಮ್ಮ ರವರ ಹೆಸರಿನಲ್ಲಿದೆ ಎಂದರೆ ಇರಬಹುದು ಆದರೆ ಇತ್ತೀಚೆಗೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಗಳು ನನ್ನ ಮಕ್ಕಳು ಆಗಿರುತ್ತಾರೋ ಇಲ್ಲವೋ ಎನ್ನುವ ಬಗ್ಗೆ ಡಿ ಎನ್ ಎ ಪರೀಕ್ಷೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನಾನು ತಿಪ್ಪಮ್ಮ ಮತ್ತು ಮಲ್ಲಿಕಾರ್ಜುನ ರವರ ಮರಣ ಪ್ರಮಾಣ ಪತ್ರಗಳನ್ನು ಸಲ್ಲಿಸಿ ಖಾತೆ ಬದಲಾವಣೆಗಳನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ತಿಪ್ಪಮ್ಮ ರವರ ಮರಣ ಪ್ರಮಾಣ ಪತ್ರದಲ್ಲಿ ಅವರ ತಂದೆ ತಾಯಿ ಮತ್ತು ಗಂಡನ ಹೆಸರು ನಮೂದು ಇದೆ ಎಂದರೆ ಸರಿ. ಗಂಡನ ಹೆಸರಿನ ಕಲಂ ನಲ್ಲಿ ಹೆಸರು ತಿಪ್ಪೇಸ್ವಾಮಿ ಎಂದು ನಮೂದು ಆಗಿದೆ ಎಂದರೆ ಸರಿ. ಸದರಿ ತಿಪ್ಪೇಸ್ವಾಮಿ ನಾನೇ **ಎಂದರೆ ಸರಿ**. ಸದರಿ ತಿಪ್ಪಮ್ಮ ರವರ ಮಕ್ಕಳೇ ವಾದಿಗಳಾಗಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಳ್ಳಕೆರೆ